ಬೈಂದೂರು ಪುರಸಭೆಯನ್ನು ಮಂಡಲ ಪಂಚಾಯತ್ ಆಗಿ ಪರಿವರ್ತನೆ.

1070 (1913): ಶ್ರೀ ಜ. ಎಸ್. ಆಚಾರ್ (ಬೈಂದೂರು):–

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೈಂದೂರು ಪುರಸಭೆಯನ್ನು ಮಂಡಲ ಪಂಚಾಯತ್ ಆಗಿ ಪರಿವರ್ತಿಸಲು ಸಾರ್ವಜನಿಕರಿಂದ ಆಕ್ಷೇಪಣೆ ಇದ್ದಲ್ಲಿ ತಿಳಿಸಬೇಕೆಂದು ಸರ್ಕಾರ ಎರಡು ವರ್ಷಗಳ ಹಿಂದೆ ಪ್ರಕಟಿಸಿದ್ದು ನಿಜವೇ ? ಪ್ರಕಟಣೆಯ ಮೂಲ ಉದ್ದೇಶದ ಕಾರಣವೇನು;

ಆ. ಯಾವ ರೀತಿಯ ಆಕ್ಷೇಪಣೆಗಳು ಬಂದಿವೆ;

ಇ. ಬಂದಿಲ್ಲವಾದಲ್ಲಿ, ಪರಿವರ್ತಿಸಲು ತೊಂದರೆ ಏನು; ವಿಳಂಬ ಯಾವ ಕಾರಣಕ್ಕಾಗಿ;

ಈ. ಈ ವಿಚಾರದಲ್ಲಿ ಸರ್ಕಾರದ ನಿಲುವು ಏನು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

ಅ. ನಿಜ. ಯಾವುದೇ ಪುರಸಭೆಯನ್ನು ಪಂಚಾಯತಿಯಾಗಿ ಪರಿವರ್ತಿಸಬೇಕಾದರೆ ಕರ್ನಾಟಕ ಜಿಲ್ಲಾಪರಿಷತ್ತುಗಳು, ತಾಲ್ಲೂಕು ಪಂಚಾಯತಿ ಸಮಿತಿಗಳು ಮಂಡಲ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳ ಅಧಿನಿಯಮ 1983ರ ಅಡಿಯಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಕರೆಯಬೇಕಾಗಿದೆ.

ಆ. ಆಕ್ಷೇಪಣೆಗಳು ಬಂದಿಲ್ಲ.

ಇ. 1991ರ ಜನಗಣತಿಯ ಪ್ರಕಾರ ಬೈಂದೂರು ಜನಸಂಖ್ಯೆ 16,488, ಕರ್ನಾಟಕ ಜಿಲ್ಲಾ ಪರಿಷತ್ತುಗಳು ತಾಲ್ಲೂಕು ಪಂಚಾಯತಿ ಸಮಿತಿಗಳು ಮಂಡಲ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳ ಅಧಿನಿಯಮ 1983ರ ಪ್ರಕಾರ 12,000ಕ್ಕಿಂತ ಜಾಸ್ತಿ ಜನಸಂಖ್ಯೆ ಇರುವ ಕಾರಣ ಮಂಡಲ ಪಂಚಾಯತಿಯಾಗಿ ಘೋಷಿಸಲು ಬರುವುದಿಲ್ಲ.

ಈ. (ಇ) ಉತ್ತರದಲ್ಲಿ ನೀಡಿರುವುದರಿಂದ ಉದ್ಭವಿಸುವುದಿಲ್ಲ.

ಕನಕಪುರ ತಾಲ್ಲೂಕಿನಲ್ಲಿ ಮಂಜೂರಾದ ನೀರು ಸರಬರಾಜು ಯೋಜನೆಗಳು.

1071 (1457): ಶ್ರೀ ಡಿ. ಕೆ. ಶಿವಕುಮಾರ್ (ಸಾತನೂರು):–

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಕನಕಪುರ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಮಂಜೂರಾಗಿರುವ ಕಿರು ನೀರು ಸರಬರಾಜು ಎ.ಆರ್. ಡಬ್ಲ್ಯು.ಎಸ್. ಮತ್ತು ಎನ್.ಆರ್. ಡಬ್ಲ್ಯು. ಎಸ್. ಯೋಜನೆಗಳೆಷ್ಟು ? (ಗ್ರಾಮವಾರು ವಿವರ ನೀಡುವುದು);

2. ಕುಡಿಯುವ ನೀರಿನ ಯೋಜನೆಗಳು ಅಸ್ತವ್ಯಸ್ತಗೊಂಡು ಸರಬರಾಜು ಮಾಡದಿರುವ ಯೋಜನೆಗಳಾವುವು ? (ಗ್ರಾಮವಾರು ವಿವರಗಳನ್ನು ಒದಗಿಸುವುದು);